**ದಿನಾಂಕ 08-05-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು - ಎದುರುದಾರರ ಪರ ಶ್ರೀ ಎ.ಆರ್.ಆರ್. ವಕೀಲರಿಂದಃ**

ಜೀವನ್ ಕುಮಾರ್ ರವರ ಮನೆ ನನ್ನ ಗಂಡನ ಮನೆಯಿಂದ ಒಂದೂವರೆ ಕಿ.ಮೀ. ಅಂತರದಲ್ಲಿರುತ್ತದೆ. ಜೀವನ್ ಕುಮಾರ್ ಮತ್ತು ಆತನ ಹೆಂಡತಿ ಈಗಲೂ ನನ್ನ ಗಂಡನ ಮನೆಗೆ ಬಂದು ಹೋಗುತ್ತಾರೆ. ಜೀವನ್ ಕುಮಾರ ಮತ್ತು ನಾನು ಈಗಲೂ ಕೂಡ ಮಾತನಾಡುತ್ತೇವೆ. ಈ ಡೈವರ್ಸ್ ಪ್ರಕರಣ ಹಾಕಿದ ನಂತರ ನನ್ನ ಮತ್ತು ಜೀವನ್ ಕುಮಾರ ನಡುವೆ ಯಾವುದೇ ಮಾತುಕತೆ ಇಲ್ಲ. ಜೀವನ್ ಕುಮಾರ ಯಾಕೆ ನನ್ನ ಜೊತೆ ಮಾತನಾಡುತ್ತಿಲ್ಲವೆಂದು ನನಗೆ ಗೊತ್ತಿಲ್ಲ. ನನ್ನ ಗಂಡ ನನ್ನ ವಿರುದ್ಧ ಕೌಟುಂಬಿಕ ನ್ಯಾಯಲಯದಲ್ಲಿ ವಿವಾಹ ವಿಚ್ಛೇಧನ ಕೋರಿ ಎಂ.ಸಿ. 157/2023 ರಂತೆ ಅರ್ಜಿ ಹಾಕಿರುತ್ತಾರೆಂದರೆ ಸರಿ. ವಿವಾಹ ವಿಚ್ಛೇಧನದ ಅರ್ಜಿಯನ್ನು ನಾನು ಓದಿರುತ್ತೇನೆಂದರೆ ಸರಿ. ಸದರಿ ಅರ್ಜಿಯಲ್ಲಿ ನನ್ನ ಗಂಡ ಹಾಕಿರುವ ವಿವಾಹ ವಿಚ್ಛೇಧನದ ಅರ್ಜಿಯಲ್ಲಿ ನಾನು ನನ್ನ ಗಂಡನಿಗೆ ಜೀವನ್ ಕುಮಾರ ರವರ ಹೆಂಡತಿಯ ಜೊತೆ ಅಕ್ರಮ ಸಂಬಂಧ ಇದೆಂದು ನಾನು ನನ್ನ ಗಂಡನಿಗೆ ಹೇಳುತ್ತಿದ್ದೇನೆಂದು ನನ್ನ ಗಂಡ ಅರ್ಜಿಯಲ್ಲಿ ಕಾಣಿಸಿದ್ದಾರೆಂದರೆ ಸರಿ. ಜೀವನ್ ಕುಮಾರ ರವರ ಹೆಂಡತಿಯ ಜೊತೆ ನಾನು ಮಾತನಾಡುತ್ತಿಲ್ಲ. ನನ್ನ ಗಂಡನ ತಮ್ಮ ಯಶ್ವಂತ್ ಕುಮಾರ ರವರ ಮನೆ ನನ್ನ ಗಂಡನ ಮನೆಯ ಪಕ್ಕದಲ್ಲಿ ಇರುತ್ತದೆ. ನನ್ನ ಗಂಡ ವಿವಾಹ ವಿಚ್ಛೇಧನ ಕೋರಿ ಅರ್ಜಿ ಹಾಕಿದ ನಂತರ ನನ್ನ ಗಂಡನ ಜೊತೆಯಾಗಲೀ, ನನ್ನ ಗಂಡನ ತಮ್ಮ ಯಶ್ವಂತ್ ಕುಮಾರ ರವರ ಜೊತೆಯಾಗಲೀ ಮತ್ತು ದಿವ್ಯಜ್ಯೋತಿ ಜೊತೆ ಸಹ ಮಾತನಾಡುತ್ತಿಲ್ಲವೆಂದರೆ ಸರಿ. ನನ್ನ ಗಂಡ ದಿವ್ಯಜ್ಯೋತಿಯ ಮನೆಗೆ ಹೋಗುತ್ತಾರೆಂದರೆ ಸರಿ. ಒಂದು ವೇಳೆ ನನ್ನ ಗಂಡನ ಸಹೋದರ ಮತ್ತು ಸಹೋದರಿಯರು ನನ್ನ ಗಂಡನ ಮನೆಗೆ ನಾನು ಇರುವ ಸಂದರ್ಭದಲ್ಲಿ ಬಂದರೆ ನನಗೆ ನೆಮ್ಮದಿ ಸಿಗುವುದಿಲ್ಲವೆಂದರೆ ಸರಿಯಲ್ಲ. ನನ್ನ ಗಂಡ ಉಚ್ಚ ನ್ಯಾಯಾಲಯದಲ್ಲಿ ಕೌಟುಂಬಿಕ ನ್ಯಾಯಾಲಯದಲ್ಲಿ ಮಾಡಿದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಈಗ ನಾನು ಮತ್ತು ನನ್ನ ಗಂಡ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆಂದರೆ ಸರಿ. ನಾನು ನನ್ನ ಗಂಡನಿಗೆ ಆತನ ಕೆಲಸದ ಸ್ಥಳದಲ್ಲಿ ಬೇರೆ ಹೆಂಸರ ಜೊತೆ ಸಂಬಂಧವಿದೆಂದು ಊಹಾಪೋಹದಲ್ಲಿ ಹೇಳಿ ಹಿಂಸೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಗಂಡನಿಗೆ ಆತನ ಸಹೋದರ, ಸಹೋದರಿಯರ ಮನೆಗೆ ಹೋಗಬಾರದೆಂದು ಹಿಂಸೆ ಕೊಡುತ್ತಿದ್ದೇನೆಂದರೆ ಸರಿಯಲ್ಲ. ನಾನು ಮದುವೆಯಾಗುವ ಸಮಯದಲ್ಲಿ ನನ್ನ ಗಂಡನಿಗೆ ಎಷ್ಟು ಸಂಬಳವಿತ್ತೆಂದು ನಾನು ಕೇಳಿಲ್ಲ. ನನ್ನ ಗಂಡನಿಗಿಂತ ನನಗೆ ಸಂಬಳ ಜಾಸ್ತಿ ಎಂದರೆ ಸರಿ. ನನ್ನ ಗಂಡನಿಗೆ ನನಗಿಂತ ಸಂಬಳ ಜಾಸ್ತಿ ಇದ್ದುದರಿಂದ ನಾನು ಕೀಳಾಗಿ ನೋಡುತ್ತಿದ್ದೆಂದರೆ ಸರಿಯಲ್ಲ. ನಾನು

ನನ್ನ ಗಂಡನಿಗೆ ಹಿಂಸೆ ನೀಡುತ್ತಿದ್ದುದರಿಂದ ನನ್ನ ಗಂಡ ನನ್ನ ವಿರುದ್ಧ ವಿವಾಹ ವಿಚ್ಛೇದನ ಕೋರಿ ಅರ್ಜಿ ಹಾಕಿರುತ್ತಾರೆಂದರೆ ಸರಿಯಲ್ಲ. ನನ್ನ ಗಂಡ ಕಟ್ಟಿದ ಮನೆಗೆ ನನಗೆ ಆಹ್ವಾನ ಪತ್ರಿಕೆ ನೀಡಿಲ್ಲವೆಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಗಂಡನ ಅತ್ತೆ ಮೀನಾಕ್ಷಿ ಗೃಹಪ್ರವೇಶಕ್ಕೆ ಬಾ ಎಂದು ಕರೆದಿದ್ದರು. ಆ ರೀತಿ ಮೀನಾಕ್ಷಿ ಕರೆದಿರಲಿಲ್ಲವೆಂದರೆ ಸರಿಯಲ್ಲ. ನಾನು ಸಂಜೆ 9.30 ಕ್ಕೆ ಗೃಹಪ್ರವೇಶಕ್ಕೆ ಹೋಗಿದ್ದೆ. ಗೃಹಪ್ರವೇಶದ ಪೂಜಾ ಕಾರ್ಯಕ್ರಮಗಳಿಗೆ ಹೋಗಿರಲಿಲ್ಲ. ಗೃಹಪ್ರವೇಶದ ದಿನ ಪೋಲೀಸರು ಬಂದಿದ್ದರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮರುದಿನ ಬಂದಿದ್ದರು ಎನ್ನುತ್ತಾರೆ. ಗೃಹಪ್ರವೇಶ ನಡೆಯಬಾರದೆನ್ನುವ ಕಾರಣಕ್ಕೆ ಮತ್ತು ತೊಂದರೆ ಕೊಡುವ ಉದ್ದೇಶದಿಂದ ನಾನು ಗೃಹಪ್ರವೇಶದ ದಿನ ಸಾಯಂಕಾಲ ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಗೃಹಪ್ರವೇಶದ ದಿನ ಸದರಿ ಮನೆಯನ್ನು ನನ್ನ ಹೆಸರಿಗೆ ಬರೆದುಕೊಡಿ ಎಂದು ಕೇಳುತ್ತಿದ್ದೆಂದರೆ ಸರಿಯಲ್ಲ. ಕೌಟುಂಬಿಕ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವಾಗ ನಾನು ಮತ್ತು ನನ್ನ ಮಗಳು ಆ ಮನೆಗೆ ಬರಬಾರದೆಂದು ನನ್ನ ಗಂಡನಿಗೆ ಮನಸ್ಥಿತಿ ಇದೆಂದು ಸಾಕ್ಷ್ಯ ನುಡಿದಿದ್ದೇನೆಂದರೆ ನನಗೆ ಗೊತ್ತಿಲ್ಲ. ನಾನು ಆ ಮನೆಗೆ ಒಂದು ವೇಳೆ ಹೋದರೆ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲವೆಂದರೆ ಸರಿಯಲ್ಲ. ನನ್ನ ಗಂಡನ ಮತ್ತು ಅವರ ಮನೆಯ ವಿರುದ್ಧ ಪರಿಹಾರ ಕೇಳಲು ಬಾದಸ್ಥರಲ್ಲವೆಂದರೆ ಸರಿಯಲ್ಲ. ನನ್ನ ತಾಯಿಯ ಮನೆಯವರ ಯಾವುದೇ ಪ್ರತಿರೋಧವಿಲ್ಲವೆಂದರೆ ಸಾಕ್ಷಿ ನನ್ನ ತಂದೆ ಇರುವವರೆಗೆ ಇರಬಹುದು, ನಂತರ ಕಷ್ಟವೆಂದು ತಿಳಿಸಿರುತ್ತಾರೆ. ನಾನು ನನ್ನ ಗಂಡನಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಈ ಸುಳ್ಳು ಅರ್ಜಿಯನ್ನು ಹಾಕಿರುತ್ತೇನೆಂದರೆ ಸರಿಯಲ್ಲ. ನನಗೆ ಈಗ ಬರುತ್ತಿರುವ ಸಂಬಳದಲ್ಲಿ ಪ್ರತ್ಯೇಕವಾಗಿ ಬಾಡಿಗೆ ಮನೆ ಮಾಡಿಕೊಂಡು ಇರಬಹುದೆಂದರೆ ಸರಿ. ಸಾಕ್ಷಿ ಮುಂದುವರೆದು ಆ ರೀತಿ ಇರಲು ಭಯವಾಗುತ್ತದೆಂದು ತಿಳಿಸಿರುತ್ತಾರೆ. ನನ್ನ ಗಂಡ ಬಿಟ್ಟು ಹೋದ ನಂತರ ವೇಲಂಕಿಣಿ ಮನೆಯಲ್ಲಿ ರಾತ್ರಿ ಸಮಯದಲ್ಲಿ ನಾನು ಮತ್ತು ನನ್ನ ಮಗಳು ಇಬ್ಬರೇ ಇರುತ್ತಿದ್ದೆವು ಎಂದರೆ ಸರಿ. ಸಾಕ್ಷಿ ಮುಂದುವರೆದು ರಾತ್ರಿ ಸಮಯದಲ್ಲಿ ನನ್ನ ತಂದೆ ಬರುತ್ತಿದ್ದರೆಂದು ತಿಳಿಸುತ್ತಾರೆ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.